ರೈತರುಗಳ ಸಾಲಾಮನ್ನಾ ಬಗ್ಗೆ

ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು):-

12 (91) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) 2016-17 ರಿಂದ ಇಲ್ಲಿಯವರೆಗೂ ರಾಯಚೂರು ಜಿಲ್ಲೆಯಲ್ಲಿ ಸಹಕಾರ ಕ್ಷೇತ್ರದಿಂದ ಸಾಲಮನ್ನಾ ಮಾಡಿರುವ ರೈತರುಗಳ ಸಂಖ್ಯೆ ಎಷ್ಟು ; ಸಾಲ ಮನ್ನಾ ಮಾಡಿರುವ ಮೊತ್ತ ಎಷ್ಟು ;

(ಆ) ರಾಯಚೂರು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು V.S.S.N. ಸಂಘಗಳು ಎಷ್ಟು ;

(ಇ) ರಾಯಚೂರಿನಲ್ಲಿರುವ RAPCMS ಹಾಗೂ TAPCMS ಹೊಂದಿರುವ ಆಸ್ತಿ ವಿವರ ಹಾಗೂ ಎರಡು ಸಂಸ್ಥೆಗಳು ಪಡೆದಿರುವ ಸಾಲದ ಮೊತ್ತ ಎಷ್ಟು ; ಈ ಎರಡು ಸಂಸ್ಥೆಗಳ ಪ್ರಸ್ತುತ ರೈತರಿಗೆ ಅನುಕೂಲಕ್ಕಾಗಿ ಹಮ್ಮಿಕೊಂಡಿರುವ ಯೋಜನೆಗಳು ಯಾವುವು;

(ಈ) 2018-19ನೇ ಸಾಲಿನಲ್ಲಿ ರಾಯಚೂರು ಜಿಲ್ಲಾ ಸಹಕಾರಿ ಬ್ಯಾಂಕ್ ವತಿಯಿಂದ ಎಷ್ಟು ರೈತರುಗಳಿಗೆ ಸಾಲ ನೀಡಲಾಗಿದೆ; ಈ ಸಾಲದ ಒಟ್ಟು ಮೊತ್ತ ಎಷ್ಟು ;

(ಉ) ರಾಯಚೂರಿನಲ್ಲಿರುವ ಆರ್.ಡಿ.ಸಿ.ಸಿ. ಬ್ಯಾಂಕಿನ ಆರ್ಥಿಕ ಪರಿಸ್ಥಿತಿಯ ವಿವರ ನೀಡುವುದು ?